( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

**ದಿಃ19/01/2023**
**ಅಸಲು ದಾವೆ.ನಂ.38/2016**
**ಪಿ.ಡಬ್ಲ್ಯೂ1**

( ಮುಂದುವರೆದ ಪಾಟೀ ಸವಾಲುಃ ಶ್ರೀ.ಎ.ಆರ್.ಜೆ. ವಕೀಲರಿಂದ ಪ್ರತಿವಾದಿಯ ಪರವಾಗಿ )

ಪ್ರತಿವಾದಿಯ ತಂದೆ ಮತ್ತು ನನ್ನ ತಂದೆ ಅಣ್ಣತಮ್ಮಂದಿರು. ನಮ್ಮ ಕುಟುಂಬಕ್ಕೆ ಸೇರಿದ ಆಸ್ತಿಗಳನ್ನು ದಿಃ09-03-1970 ರಂದು ಅದರೆ ನನ್ನ ತಂದೆಯು ಬದುಕಿದ್ದ ಕಾಲದಲ್ಲಿ ವಿಭಾಗ ಮಾಡಿಕೊಳ್ಳಲಾಗಿದೆ ಎಂದರೆ ಸರಿ. ಈಗ ನನ್ನ ತಂದೆ ಮತ್ತು ಪ್ರತಿವಾದಿಯ ತಂದೆ ಬದುಕಿರುವುದಿಲ್ಲ ಎಂದರೆ ಸರಿ. ನನ್ನ ತಂದೆ ಸೇರಿದಂತೆ ಅವರ 5 ಜನ ಅಣ್ಣತಮ್ಮಂದಿರು ಕೂಡ ಪೌತಿಯಾಗಿರುತ್ತಾರೆ. (ನನ್ನ ತಂದೆ ಸೇರಿಸಿ 6 ಜನ ಸೋದರರು).

ಸದರಿ ವಿಭಾಗ ಆಗುವ ಸಂದರ್ಭದಲ್ಲಿ ಪ್ರತಿವಾದಿಯ ತಂದೆಗೆ 3 ಗುಂಟೆ ಜಮೀನು ಎನ್ನುವ ಬದಲು 3 ಗಜ ಎಂದು ಕೈತಪ್ಪಿನಿಂದ ಆಗಿರುತ್ತದೆ ಎಂದರೆ ಸಾಕ್ಷಿಯ ಸರಿಯಲ್ಲ ಎಂದು ನುಡಿಯುತ್ತಾರೆ. ಸದರಿ 3 ಗುಂಟೆ ಜಮೀನು 1970 ನೇ ಇಸವಿಯಲ್ಲಿ ವಿಭಾಗ ಆದಾಗಿನಿಂದ ಪ್ರತಿವಾದಿಯ ಕುಟಂಬದ ಸ್ವಾಧೀನದಲ್ಲಿ ಇದೆ ಎಂದರೆ ಸರಿಯಲ್ಲ. ಪ್ರತಿವಾದಿಯ 3 ಗುಂಟೆ ಜಮೀನನ್ನು ಲಪಟಾಯಿಸಬೇಕೆಂದು ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಜಮೀನನ್ನು ಕ್ರಯಕ್ಕೆ ಪಡೆದುಕೊಂಡೆ ಎನ್ನಲಾದ ಕ್ರಯ ಪತ್ರದಲ್ಲಿ ಕೂಡ ನಮೂದು ಇಲ್ಲ ಎಂದರೆ ಸರಿಯಲ್ಲ ನಾವು ಊರಿನಲ್ಲಿ ಬಲಾಢ್ಯರಾಗಿರುವುದರಿಂದ ಪ್ರತಿವಾದಿಯ ಜಮೀನನ್ನು ಹೇಗಾದರೂ ಲಪಟಾಯಿಸಬೇಕು ಎಂದು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ)

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )
ಓ.ಹೇ.ಕೇ.ಸ.ಇದೆ.

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**

**ಜೆ.ಎಂ.ಎಫ್.ಸಿ,ಅರಕಲಗೂಡು.**